ಅಂದಾನಪ್ಪನನ್ನು ಬೆಂಡೆತ್ತುತ್ತಿದ್ದರೆ ಎದುರಿಗೆ ಕುಳಿತ ಶಾಂತವೀರಪ್ಪಗೌಡರ ಮುಖದಲ್ಲಿ ಗೆಲುವು ಕಳೆ ಕಟ್ಟುತ್ತಿತ್ತು. ಎಂ.ಎಲ್.ಎ ಅಂದಾನಪ್ಪನೇನೂ ಸಾಮಾನ್ಯನಾಗಿರಲಿಲ್ಲ. ಮಂತ್ರಿಗಳು ಚಾಪೆ ಕೆಳಗೆ ತೂರಿದರೆ ಅವನು ರಂಗೋಲಿ ಕೆಳಗೆ ನುಸುಳುತ್ತಿದ್ದ.

‘ಸರ್ ಅದು ಒಂಥರ ಸೆನ್ಸಿಟಿವ್ ವಿಚಾರ. ಹುಡುಗನ ಕಮ್ಯುನಿಟಿ ಅವರೇ ಊರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರೋದು. ಜಿಲ್ಲೆಯಲ್ಲೂ ಅವರ ಪಾಪ್ಯುಲೇಷನ್ ಜಾಸ್ತಿ ಇದೆ. ಸ್ವಲ್ಪ ಎಡವಟ್ಟಾದರೂ ವೋಟ್‌ಬ್ಯಾಂಕ್ ಕೈತಪ್ಪಿ ಹೋಗುವ ಅಪಾಯವಿದೆ’ ಅಂದಾನಪ್ಪ ಎಸೆದ ಬಾಣ ಸರಿಯಾದ ಜಾಗಕ್ಕೆ ನಾಟಿತ್ತು. ಹೈಕಮಾಂಡ್‌ಗೆ ಕಳುಹಿಸಲು ತಯ್ಯಾರಾದ ನಿಗಮ ಮಂಡಳಿಗಳ ಅಧ್ಯಕ್ಷರ ಹೆಸರುಗಳ ಪಟ್ಟಿಯಲ್ಲಿ ತನ್ನ ಹೆಸರಿಲ್ಲದಿರುವುದರಿಂದ ಮುಂದೆ ಆಗಬಹುದಾದ ಪರಿಣಾಮವನ್ನು ಅಂದಾನಪ್ಪ ಪರೋಕ್ಷವಾಗಿ ಹೇಳುತ್ತಿರುವನೆಂದು ಮಂತ್ರಿಗಳಿಗೆ ಅರ್ಥವಾಗಿತ್ತು.



‘ಅಂದಾನಪ್ಪ ಅದೇ ಕಮ್ಯುನಿಟಿಗೆ ಸೇರಿದ ನಿಮ್ಮನ್ನು ನಿಗಮ ಮಂಡಳಿಗೆ ಅಧ್ಯಕ್ಷರನ್ನಾಗಿ ಮಾಡಿದರೆ ಈ ಪ್ರಕರಣವೂ ಶಾಂತವಾಗುತ್ತೆ ಮತ್ತು ವೋಟ್‌ಬ್ಯಾಂಕ್ ಕೂಡ ನಮ್ಮ ಕೈತಪ್ಪಿ ಹೋಗಲ್ಲ. ಮುಖ್ಯಮಂತ್ರಿಗಳಿಗೆ ಹೇಳಿ ನಿಮ್ಮ ಹೆಸರು ಪಟ್ಟಿಯಲ್ಲಿ ಸೇರಿಸುವ ವ್ಯವಸ್ಥೆ ಮಾಡ್ತೀನಿ. ಸ್ವಲ್ಪ ಬೇಗ ಈ ಗೌಡರ ಸಮಸ್ಯೆ ಬಗೆಹರಿಸಿ’ ಮಂತ್ರಿಗಳ ಮಾತು ಕೇಳುತ್ತಿದ್ದಂತೆ ಉತ್ತೇಜಿತನಾದ ಅಂದಾನಪ್ಪ ‘ಸರ್ ನೀವೇನೂ ಯೋಚಿಸಬೇಡಿ. ಗೌಡರ ಮಗಳು ನನಗೂ ಮಗಳಿದ್ದಂತೆ. ಹೊಸ ಗದ್ದಲ ಎಬ್ಬಿಸಿ ಜನ ಹಿಂದಿನ ಪ್ರಕರಣ ಮರೆಯುವಂತೆ ನೋಡಿಕೊಂಡರಾಯಿತು. ಎಸ್.ಪಿ ಅವರಿಗೆ ಹೇಳಿ ಹುಡುಗನನ್ನು ಒಂದೆರಡು ದಿನ ಪೊಲೀಸ್ ಸ್ಟೇಶನ್‌ನಲ್ಲಿ ಕೊಳೆಯುವಂತೆ ಮಾಡಿದರೆ ಮೆತ್ತಗಾಗತಾನೆ. ತಡಮಾಡಬೇಡಿ ಬೇಗ ಹೆಸರು ಪಟ್ಟಿಯಲ್ಲಿ ಸೇರಿಸುವ ವ್ಯವಸ್ಥೆ ಮಾಡಿ. ಇಲ್ಲಿದನ್ನೆಲ್ಲ ನಾನು ನೋಡಕೊತೀನಿ’ ಎಂದು ನುಡಿದು ಮುಂದಿನ ಯೋಜನೆಗಾಗಿ ಕಾರ್ಯತತ್ಪರನಾದ. ಸಮಸ್ಯೆ ಬಗೆಹರಿದ ಸಂತೋಷದಲ್ಲಿ ಮಗಳಿಗೆ ಬೇಗ ಮದುವೆ ಮಾಡಬೇಕೆಂದು ಯೋಚಿಸುತ್ತ ಶಾಂತವೀರಪ್ಪಗೌಡರು ಊರಿನ ಬಸ್ ಹತ್ತಿದರು.

* * *

ಇದೆಲ್ಲ ನಡೆದು ಹಲವು ವರ್ಷಗಳೇ ಗತಿಸಿ ಹೋಗಿವೆ. ವೈಜಯಂತಿಗೆ ಸೋದರ ಮಾವನ ಮಗನೊಂದಿಗೆ ಮದುವೆಯಾಗಿ ಎರಡು ಮಕ್ಕಳಾಗಿವೆ. ಊರಿಗೆ ಹೈಸ್ಕೂಲು ಮಂಜೂರಾಗಿರುವುದರಿಂದ ಊರಿನ ಮಕ್ಕಳು ಕಲ್ಲಹಂಗರಗಾ ಹೈಸ್ಕೂಲಿಗೆ ಹೋಗುವ ತಾಪತ್ರಯ ಈಗಿಲ್ಲ. ಕಲ್ಯಾಣಿಯ ಕೇಬಲ್ ಜಾಲ ಬೇರೆ ಊರುಗಳಿಗೂ ವಿಸ್ತರಿಸಿದೆ. ಪರಮಾನಂದನ ಪುಸ್ತಕಗಳಿಗೆ ಅನೇಕ ಪ್ರಶಸ್ತಿಗಳು ಪ್ರಾಪ್ತವಾಗಿವೆ. ಈ ಮೊದಲು ಜಿಲ್ಲಾಪತ್ರಿಕೆಯಾಗಿದ್ದ ‘ಸುಂಟರಗಾಳಿ’ ರಾಜ್ಯ ಪತ್ರಿಕೆಯಾಗಿ ಓದುಗರ ಬಳಗ ಹೆಚ್ಚಿಸಿಕೊಂಡು ಸಂಪಾದಕ ಬೆಂಕಿ ಸಂಗಣ್ಣನನ್ನೂ ಬೆಳೆಸಿದೆ. ಶಂಕ್ರಣ್ಣ ಈಗ ಹಲವು ವಾಹಿನಿಗಳ ಒಡೆಯನಾಗಿದ್ದಾರೆ. ನೀಲಾಂಜನ ವೈಸ್‌ಚಾನ್ಸಲರ್‌ರಾಗಿ, ಅಂದಾನಪ್ಪ ಮಂತ್ರಿಯಾಗಿ ಬಡ್ತಿಪಡೆದಿರುವರು. ಪರಮಸಿದ್ಧ ಪಿಎಚ್.ಡಿ ಪೂರ್ಣಗೊಳಿಸಿ ಲಕ್ಷಾಂತರ ರೂಪಾಯಿಗಳನ್ನು ದೇಣಿಗೆ ನೀಡಿ ಅನುದಾನಿತ ಕಾಲೇಜಿನಲ್ಲಿ ಕಾಯಂ ನೌಕರಿ ಗಿಟ್ಟಿಸಿಕೊಂಡು ಮದುವೆಯಾಗಿ ಸುಖದಿಂದ ಬಾಳುತ್ತಿದ್ದಾನೆ. ದಿಲ್‌ಖುಷ್ ಪಾನ್‌ಶಾಪ್‌ನ ಬಾಗಿಲು ಈಗಲೂ ಮುಚ್ಚಿಕೊಂಡೆ ಇದೆ. ಮಳೆ ಮತ್ತು ಬಿಸಿಲಿನ ಹೊಡೆತಕ್ಕೆ ಅಕ್ಷರಗಳು ಮಂಕಾಗಿ ಮಸುಕು ಮಸುಕಾಗಿ ಕಾಣಿಸುತ್ತಿವೆ. ಶರೀರ ಕೃಶವಾಗಿ ವಯಸ್ಸಾದಂತೆ ಕಾಣುತ್ತಿರುವ ಚಂದ್ರು ಕೈಯಲ್ಲಿ ಕಾಗದ ಹಿಡಿದು ‘ಒಲವಿನ ಉಡುಗೊರೆ ಕೊಡಲೇನು ರಕುತದಿ ಬರೆದೆನು ಇದ ನಾನು’ ಎಂದು ಹಾಡುತ್ತ ಊರಿನ ಬೀದಿಗಳಲ್ಲಿ ಈಗಲೂ ಅಲೆಯುತ್ತಿರುತ್ತಾನೆ.

●